# ಮೌರ್ಯರ ಹುಡುಗಿಯ ಝಲಕ್ಕು

ಕ್ಷಣಗಣನೆ ಶುರುವಾಗಿತ್ತು. ಕೊರಿಯೋಗ್ರಾಫರ್ ಬಿಲ್ಲಿನಂತೆ ಬಾಗಬಲ್ಲ ಸಹಾಯಕಿಯ ಮೂಲಕ ಸ್ಟೆಪ್ಪು, ಬಾಗುಬಳುಕುಗಳ ಪ್ರಾತ್ಯಕ್ಷಿಕೆ ನೀಡುತ್ತಿದ್ದರೆ, ಮುದ್ದುಮುಖದ ನೃತ್ಯಗಾರ್ತಿ ಕಣ್ಣಗಲಿಸಿ ನೋಡುತ್ತಿದ್ದರು. ಮುಂಬೈನಿಂದ ಬಂದಿದ್ದ ಆಕೆಯ ಹೆಸರಿನಲ್ಲಿ ಮೌರ್ಯ ಎಂಬ ವಂಶ ಸೇರಿದ್ದರೂ ಅವರಿಗೂ ನಮ್ಮ ಇತಿಹಾಸದ ಮೌರ್ಯರಿಗೂ ಏನು ಸಂಬಂಧವೋ ಗೊತ್ತಿಲ್ಲ. ತಮಗೂ ಮೌರ್ಯರಿಗೂ ಏನು ಸಂಬಂಧ ಎಂದು ಸುದ್ದಿಮಿತ್ರರೊಬ್ಬರು ತಮ್ಮದು ಜಾಣತನದ ಪ್ರಶ್ನೆ ಎಂದು ಭಾವಿಸಿ, ಆತ್ಮವಿಶ್ವಾಸದಿಂದ ಕೇಳಿಯೇಬಿಟ್ಟರು. ಆ ನೃತ್ಯಗಾರ್ತಿಯೂ ನಾಟಿ ಎಂದುಬಿಡಬೇಕೆ?

ನೃತ್ಯಗಾರ್ತಿ ಟೇಕ್‌ಗೆ ಸಿದ್ಧರಾದಾಗ ಮಾನಿಟರ್‌ನಲ್ಲಿ ಅವರ ಮೈಮಾಟ ಎದ್ದುಕಾಣುತ್ತಿತ್ತು. ಕ್ಯಾಮೆರಾಮನ್‌ಗೆ ಅದು ತುತ್ತಿನ ವಿಷಯ. ನೃತ್ಯಗಾರ್ತಿಗೆ ಅದು ವೃತ್ತಿಪರತೆ. ಆದರೆ, ಚಿತ್ರೀಕರಣ ನೋಡಲು ಹೋಗಿದ್ದ ಮಂದಿ ಕಣ್ಣುಗಳನ್ನೇ ಕ್ಯಾಮೆರಾ ಮಾಡಿಕೊಂಡು ನಿಂತರು. ಕೆಲವರ ಬಿಟ್ಟ ಬಾಯಿಯಲ್ಲಿ ಜೊಲ್ಲು ಜಮೆಯಾಗುತ್ತಿತ್ತು. ಆ ಗುಂಪಿನಲ್ಲಿ ತಮ್ಮ ಅಭಿಮಾನಿಗಳು ಯಾರು, ಸುದ್ದಿಮಿತ್ರರು ಯಾರು ಎಂದು ಗುರುತಿಸಲು ವಿಫಲರಾದ ನೃತ್ಯಗಾರ್ತಿ ಮಾತಿಗೆ ತೆರೆದುಕೊಳ್ಳಲೆಂದು ಕುರ್ಚಿ ಮೇಲೆ ಬಂದು ಕುಳಿತಾಗ ವಿಶಾಲವಾದ ಗೌನ್ ಒಂದು ಅವರ ಇಡೀ ದೇಹವನ್ನು ಮುಚ್ಚಿತ್ತು. ಕಾಣುತ್ತಿದ್ದುದು ಮುದ್ದುಮುಖವಷ್ಟೆ.

'ಹೌ ಡು ಯು ಲೈಕ್ ಮಿ?' ಎಂದು ನೃತ್ಯಗಾರ್ತಿ ಸುದ್ದಿಮಿತ್ರರನ್ನು ಕೇಳಿದಾಗ, ಯಾರಿಗೂ ಮಾತೇ ಹೊರಡಲಿಲ್ಲ. ಬೆಂಗಳೂರಿನ ಬ್ರಿಗೇಡ್ ರಸ್ತೆಯ ಡಾನ್ಸ್‌ಬಾರ್‌ನ ಮಂದದೀಪಗಳ ಬೆಳಕಿನಲ್ಲಿ ಆ ಮಂದಸ್ಮಿತೆ ಕೆಲವರ ಕಣ್ಣಿಗೆ ತುಂಟಿಯಂತೆಯೂ, ಕೊರಿಯೋಗ್ರಾಫರ್ ಕಣ್ಣಿಗೆ ಪರಮ ಸುಂದರಿಯಂತೆಯೂ ಕಂಡರು.

ಹಲವು ಕನ್ನಡ ಸಿನಿಮಾಗಳ ಐಟಂ ಗೀತೆಗಳಿಗೆ ಹೆಜ್ಜೆಹಾಕಿದ ಅನುಭವ ಬೆನ್ನಿಗಿಟ್ಟುಕೊಂಡ ಮೌರ್ಯರ ಹುಡುಗಿಗೆ ಆ ಸಿನಿಮಾದಲ್ಲಿ ನಾಯಕಿಯಾಗುವ ಆಫರನ್ನೇ ಚಿತ್ರದ ನಿರ್ಮಾಪಕ ಕಂ ನಾಯಕ ನಟ ಕೊಟ್ಟಿದ್ದರು. ರಾಜಕಾರಣಿಯೂ ಆದ ನಾಯಕ ತಾನೇ ಹೇಳಿಕೊಂಡಂತೆ ಆ ನೃತ್ಯಗಾರ್ತಿಯ ಅಭಿಮಾನಿ. ಆದರೆ, ನೃತ್ಯಗಾರ್ತಿ ನಾಯಕನ ಆಫರನ್ನು ನಯವಾಗಿ ತಿರಸ್ಕರಿಸಿ, ಒಂದು ಹಾಡಿಗೆ ಕುಣಿದು ಹೋಗಲಷ್ಟೇ ಬಂದಿದ್ದರು.

ತನ್ನ ವೃತ್ತಿಯ ಬಗೆಗೆ ಆ ನೃತ್ಯಗಾರ್ತಿಗೆ ತುಂಬು ಹೆಮ್ಮೆ. ಸಿನಿಮಾಗಳ ಹಾಡಿಗೆ ಕುಣಿಯುವುದು ತಮಾಷೆಯಲ್ಲ. ಎಷ್ಟೋ ನಾಯಕಿಯರ ಸಾಮರ್ಥ್ಯಕ್ಕೆ ಮೀರಿದ ಕಲೆ ಅದು ಎಂದು ಭಾವಿಸಿದ್ದ ನೃತ್ಯಗಾರ್ತಿ ಕನ್ನಡದಲ್ಲಿ ಯಾವ ನಟಿಯೂ ತನ್ನ ಸಮಕ್ಕೆ ಕುಣಿಯಲಾರಳು ಎಂದು ಆತ್ಮವಿಶ್ವಾಸದಿಂದ ಹೇಳಿದರು. ಆಗ ಆ ಸಿನಿಮಾ ನಾಯಕ ನಟ ಚಪ್ಪಾಳೆ ಹೊಡೆದು ನೃತ್ಯಗಾರ್ತಿಯ ಪ್ರತಿಭೆಯನ್ನು ಸಮರ್ಥಿಸುವ ಭಾವ ಹೊರಸೂಸಿದರು.

ಮತ್ತೆ ಕೊರಿಯಾಗ್ರಫರ್ ಸಿದ್ಧರಾದದ್ದೇ ನೃತ್ಯಗಾರ್ತಿ ಡಾನ್ಸ್ ಫ್ಲೋರ್‌ನತ್ತೆ ಹೆಜ್ಜೆ ಇಟ್ಟರು. ಅವರ ಮೈಮುಚ್ಚಿದ್ದ ಗೌನ್ ಕಳಚುವುದನ್ನೇ ಕಾಯುತ್ತಾ ಅನೇಕರು ನಿಂತಿದ್ದರು. ನೃತ್ಯಗಾರ್ತಿ ಅವರಿಗೆಲ್ಲಾ ಕಣ್ಣುಮಿಟುಕಿಸಿದಂತೆ ಮಾಡಿ, ನಯವಾಗಿಯೇ 'ಪ್ಲೀಸ್ ಇಲ್ಲಿಂದ ಹೊರಡಿ' ಎಂದರು. ಅವರಿಗೆ 'ಸ್ವಲುಪ ಸ್ವಲುಪ' ಕನ್ನಡವೂ ಬರುತ್ತಿತ್ತು. ಹೆಸರಿನಲ್ಲಿಯೇ ಕ್ರಿಯೇಟಿವಿಟಿ ಇರುವುದರಿಂದ ತನ್ನದು ಅನ್ವರ್ಥನಾಮ ಎಂದು ಬೀಗಿದ ಆ ನೃತ್ಯಗಾರ್ತಿಗೆ ಈಗ ಹೆಚ್ಚು ಅವಕಾಶಗಳು ಇಲ್ಲ.

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68